

# ಚೆಲುವಿಗೆ ಚಿನ್ನದ ಬಿಂದಿ

■ ರೂಪಾ ಕೆ.ಎಂ.

ಮುಖದ ಚೆಲುವನ್ನು ಚಿಕ್ಕ ಹಣೆಬೊಟ್ಟು, ಬಿಂದಿಗಳು ದೊಡ್ಡದಾಗಿಯೇ ತೀಡುತ್ತವೆ. ಆದರೆ, ಇಂಥ ಬಿಂದಿಗಳನ್ನು ಶುದ್ಧ ಚಿನ್ನದಿಂದ ಮಾಡಿ ತೊಡುವ ಸಂಪ್ರದಾಯವು ಕೆಲವು ಕಡೆಗಳಲ್ಲಿ ಇದೆ. ಅಷ್ಟೆ ಅಲ್ಲದೇ, ಉಳ್ಳವರು ಬಿಂದಿಯನ್ನು ಚಿನ್ನ ಹಾಗೂ ಬೆಳ್ಳಿಯಲ್ಲಿ ಮಾಡಿಸಿ, ತೊಟ್ಟು ಖುಷಿ ಪಡುತ್ತಾರೆ.

ಆರಂಭದಲ್ಲಿ ಪ್ರತಿಷ್ಠೆಯ ಬಿಂಬವಾಗಿದ್ದ ಸಾಂಪ್ರದಾಯಿಕ ಚಿನ್ನದ ಬಿಂದಿಗಳು ಆಧುನಿಕ ಫ್ಯಾಷನ್ ಭಾಗವಾಗಿದೆ. ಈಗೀಗ ಹಲ ಬಗೆಯ ವಿನ್ಯಾಸ ಹಾಗೂ ಶೈಲಿಗಳಲ್ಲಿ ಚಿನ್ನ ಹಾಗೂ ಬೆಳ್ಳಿಯ ಬಿಂದಿಗಳು ಲಭ್ಯವಿವೆ. ಸಾಮಾನ್ಯವಾಗಿ ಸಾಂಪ್ರದಾಯಿಕ ಹಾಗೂ ಇಂಡೋವೆಸ್ಟರ್ನ್ ಶೈಲಿಯ ಉಡುಗೆಗಳಿಗೂ ಇಂಥ ಬಿಂದಿಗಳು ಹಿಡಿಸುತ್ತವೆ.

ಸರಳವಾಗಿರುವ ಚಿನ್ನದ ಚುಕ್ಕಿಯಂತೆ ಕಾಣುವ ಬಿಂದಿಗಳು ಕ್ಲಾಸಿಕಲ್ ಆಗಿಯೂ ಅತ್ಯಾಧುನಿಕವಾಗಿ ಕಾಣಬಲ್ಲದು. ಪಾಶ್ಚಿಮಾತ್ಯ ಶೈಲಿಯ ಉಡುಪುಗಳಿಗೂ ಈ ಚುಕ್ಕಿ ಗಾತ್ರದ ಬಿಂದಿಗಳು ಒಪ್ಪುತ್ತವೆ. ಮುಖದ ಆಕಾರದ ಮೇಲೆ ಚುಕ್ಕಿಯ ಗಾತ್ರ ನಿರ್ಧಾರಗೊಂಡರೆ, ಆಲಂಕಾರಿಕವಾಗಿಯೂ ಅಲ್ಲದೇ ಫ್ಯಾಷನೆಬಲ್ ಆಗಿಯೂ ಕಾಣಬಹುದು.

ಇನ್ನೂ ಈ ಸಾಂಪ್ರದಾಯಿಕ ಚಿನ್ನದ ಬಿಂದಿಗಳಲ್ಲಿ ಸಂಪೂರ್ಣ ಚಿನ್ನವಷ್ಟೆ ಅಲ್ಲದೇ, ವಜ್ರ ಹಾಗೂ ಹೊಳೆಯುವ ಅಮೆರಿಕನ್ ಡೈಮಂಡ್, ಸ್ಫಟಿಕಗಳನ್ನು ಅಳವಡಿಸಲಾಗಿರುತ್ತದೆ. ಇದು ತೊಟ್ಟವರ ಮೆರುಗನ್ನು ಹೆಚ್ಚಿಸುತ್ತದೆ. ಈಗೀಗ ಮದುಮಗಳ ಚಿನ್ನಾಭರಣಗಳ ಬಾಕ್ಸ್‌ನಲ್ಲಿ ಚಿನ್ನದ ಬಿಂದಿಗೂ ಅವಕಾಶವಿದ್ದು, ಕೆಲವೇ ಮಿಲಿ ಗ್ರಾಂಗಳಲ್ಲಿ ಇದನ್ನು ತಯಾರಿಸಲಾಗುತ್ತದೆ.

ಸಾಮಾನ್ಯ ಬಿಂದಿಗಳಿಗಿಂತ ಹೊಳಪು ಮತ್ತು ಸೊಬಗಿನಿಂದಾಗಿ ಚಿನ್ನದ ಬಿಂದಿಗಳು ಮನಸೂರೆ ಮಾಡುತ್ತವೆ. ಸಣ್ಣ ಹಾಗೂ ವೃತ್ತಾಕಾರದ ವಿನ್ಯಾಸವು ಧರಿಸುವವರ ಹಣೆಯನ್ನು ಗಮನಾರ್ಹವಾಗಿ ಕಂಗೊಳಿಸುವಂತೆ ಮಾಡುತ್ತದೆ.

ಚಿನ್ನದ ಬಿಂದಿಯು ಹಣೆಯ ಮೇಲೆ ಅಂಟಲು ವಿಶೇಷ ಅಂಟುಗಳನ್ನು ಬಳಸಲಾಗುತ್ತದೆ. ಇದು ಹಲವು ಗಂಟೆಗಳ ಕಾಲ ಬರಬಲ್ಲದು. ಅಲ್ಲದೇ, ಆಗಾಗ್ಗೆ ಬೇಕಾದ ಅಂಟನ್ನು ಹಚ್ಚಿಯೂ ಚಿನ್ನದ ಬಿಂದಿಯನ್ನು ಬಳಸುವಂತೆ ವಿನ್ಯಾಸ ಮಾಡಲಾಗಿರುತ್ತದೆ.



## ಡೋಗ್ರಾ: ಗೌರವದ ಸಂಕೇತ

ಚಿನ್ನದ ಬಿಂದಿಯು ಫ್ಯಾಷನ್ ಆ್ಯಕ್ಸೆಸರೀಸ್‌ನಲ್ಲಿ ಸೇರುವ ಮುನ್ನ ರಾಣಿ, ಮಹಾರಾಣಿಯರು, ರಾಜವಂಶಸ್ಥರ ಮನೆಯಲ್ಲಿ ಚಿನ್ನದ ಬಿಂದಿಯು ಸಾಮಾನ್ಯವಾಗಿತ್ತು. ಇದಲ್ಲದೇ ಜಮ್ಮು ಮತ್ತು ಕಾಶ್ಮೀರದ ಕೆಲವು ಭಾಗಗಳನ್ನು ಒಳಗೊಂಡ ದುಗ್ಗರ್ ಪ್ರದೇಶದಲ್ಲಿ ವಾಸವಿದ್ದ ಡೋಗ್ರಾ ಮಹಿಳೆಯರ ಫ್ಯಾಷನ್ ಆಕ್ಸೆಸರಿಸ್‌ನಲ್ಲಿ ಚಿನ್ನದ ಬಿಂದಿ ಅನಾದಿಕಾಲದಿಂದಲೂ ಇದೆ. ಸಾಹಿತ್ಯ, ಕಲೆ ಹಾಗೂ ಜಾನಪದ ಸಂಸ್ಕೃತಿ ಮೇಳೈಸಿರುವ ಡೋಗ್ರಾ ಸಮುದಾಯದ ಮಹಿಳೆಯರಲ್ಲಿ ಚಿನ್ನದ ಬಿಂದಿಗೆ ತನ್ನದೇ ಆದ ಮಹತ್ವವಿದೆ. ಸೌಂದರ್ಯ, ಹೆಮ್ಮೆ, ಪರಂಪರೆಯನ್ನು ಬಿಂಬಿಸುವುದಲ್ಲದೇ ಪ್ರತಿ ಡೋಗ್ರಾ ಮನೆಯಲ್ಲಿಯೂ ಚಿನ್ನದ ಬಿಂದಿಯನ್ನು ಅಮೂಲ್ಯ ಆಸ್ತಿಯೆಂದು ಇಂದಿಗೂ ಪರಿಗಣಿಸಲಾಗುತ್ತದೆ.

ಆರಂಭದಲ್ಲಿ ಶ್ರೀಮಂತ ಕುಟುಂಬಗಳ ಮಹಿಳೆಯರಿಗಾಗಿ ವಿನ್ಯಾಸಗೊಂಡಿದ್ದ ಚಿನ್ನದ ಬಿಂದಿಗಳು ಸಾಮಾಜಿಕ ಸ್ಥಾನಮಾನದ ಪ್ರದರ್ಶನದ ಭಾಗವಾಯಿತು. ಅಪಾರ ಜನಪ್ರಿಯತೆ ಗಳಿಸಿದ್ದ ಚಿನ್ನದ ಬಿಂದಿಗಳು ಕಾಲಾನಂತರದಲ್ಲಿ ಡೋಗ್ರಾ ಸಮುದಾಯದ ವಿಶಿಷ್ಟ ಗುರುತಿನ ಲಕ್ಷಣವಾಯಿತು. ಆಲಂಕಾರಿಕ ಪರಿಕರ ಎಂಬುದಕ್ಕಿಂತಲೂ ವೈವಾಹಿಕ ಹೆಮ್ಮೆ, ಸಮೃದ್ಧಿ ಹಾಗೂ ಕೌಟುಂಬಿಕ ಗೌರವದ ಸಂಕೇತವಾಗಿಯೂ ಚಿನ್ನದ ಬಿಂದಿಗಳನ್ನು ನೋಡಲಾಗುತ್ತದೆ. ■